**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.422/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | ಮುದುಕೇಶ ಮನ್ನೆಣ್ಣನವರ | ಪಿಡಬ್ಲ್ಯೂ | 29 |
| ತಂದೆಯ ಹೆಸರು | ಏಳುಕೋಟೆಪ್ಪ | ಪಿಡಬ್ಲ್ಯೂ | 15 |
| ವಯಸ್ಸು | 63 ವರ್ಷ | | |
| ಉದ್ಯೋಗ | ನಿವೃತ್ತ ಪಿ.ಎಸ್.ಐ | | |
| ವಾಸಸ್ಥಳ | ರಾಣೇಬೆನ್ನೂರ | | |

**ದಿಃ06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1) ನಾನು ದಿನಾಂಕಃ 2019 ರಿಂದ ದಿನಾಂಕಃ 31.05.2021 ರವರೆಗೆ ಹಾವೇರಿ ಶಹರ ಪೊಲೀಸ ಠಾಣೆಯಲ್ಲಿ ಪಿ.ಎಸ್.ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ 04.11.2016 ರಂದು ಮಧ್ಯಾಹ್ನ 2–50 ಘಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾ.ಸಾ–1 ಇವರು ಹಾಜರುಪಡಿಸಿದ ಗಣಕೀಕೃತ ದೂರನ್ನು ಸ್ವೀಕರಿಸಿ ಅದರ ಮೇರೆ ಹಾವೇರಿ ಶಹರ ಪೊಲೀಸ ಠಾಣೆ ಗುನ್ನಾ ನಂಬರಃ 281/2016 ಪ್ರಕರಣವನ್ನು ದಾಖಲಿಸಿ ನಂತರ ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದೇನೆ. ದಿನಾಂಕಃ 05.11.2016 ರಂದು ಘಟನಾ ಸ್ಥಳಕ್ಕೆ ಬೇಟಿ ನೀಡಿ ಚಾ.ಸಾ–1 ಇವರು ತೋರಿಸಿದ ಸ್ಥಳವನ್ನು ನೋಡಿ ಘಟನಾ ಸ್ಥಳದಲ್ಲಿ ಬೆಳಗಿನ 8–00 ಘಂಟೆಯಿದ 8–45 ರವರೆಗೆ ಸ್ಥಳ

ಪಂಚನಾಮೆಯನ್ನು ಮಾಡಿದ್ದೇನೆ. ಅದೇ ದಿವಸ ಮತ್ತು ದಿನಾಂಕಃ 18.11.2016 ರಂದು ಈ ಪ್ರಕರಣದ ಕುರಿತಂತೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ಹಾವೇರಿಯ ತಹಶೀಲ್ದಾರ ಇವರಿಗೆ ಮನವಿ ಪತ್ರ ಬರೆದಿದ್ದೇನೆ ಹಾಗೂ ಚಾ.ಸಾ-5 ಮತ್ತು 7 ಇವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ದಿನಾಂಕಃ 10.12.2016 ರಂದು ಆರೋಪಿಗಳು ಕೃತ್ಯಕ್ಕೆ ಬಳಸಿದ ಸ್ಥಳದಲ್ಲಿ ಜಪ್ತು ಪಂಚನಾಮೆಯನ್ನು ಮಾಡಿ ಆರೋಪಿಗಳು ಕೃತ್ಯಕ್ಕೆ ಬಳಸಿದ ಒಂದು ಕಂಪ್ಯೂಟರ ಮಾನೀಟರ ಮತ್ತು ಒಂದು ಸಿ.ಪಿ.ಯು ಹಾಗೂ ಇನ್ನಿತರೆ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದೇನೆ. ದಿನಾಂಕಃ 11.12.2016 ರಂದು ಆರೋಪಿಗಳು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾವೇರಿಯಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಬಂದು ಪೊಲೀಸರ ಸಮಕ್ಷಮ ಹಾಜರಾಗಿ ನಂತರ ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ.

2) ದಿನಾಂಕಃ 13.12.2016 ಮತ್ತು ದಿನಾಂಕಃ 15.12.2016 ರಂದು ಚಾ.ಸಾ-15 ರಿಂದ 28 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ದಿನಾಂಕಃ 01.03.2017 ರಂದು ಪಿರ್ಯಾದಿಗೆ ಪ್ರಕರಣದ ಕುರಿತಂತೆ ದಾಖಲಾತಿಗಳನ್ನು ಹಾಜರುಪಡಿಸಲು ನೋಟಿಸನ್ನು ಕೊಟಿಟದ್ದೇನೆ. ದಿನಾಂಕಃ 15.03.2017 ರಂದು ಪಿರ್ಯಾದಿ ಕೊಟ್ಟಂತಹ ಮರುತ್ತರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಸದರಿ ತನಿಖೆಯಿಂದ ಹಾಗೂ ದಾಖಲಾತಿಗಳನ್ನು ಪರಿಶೀಲನೆ ಮಾಡಿ ನೋಡಿದ ನಂತರ ಆರೋಪಿಗಳ ವಿರುದ್ಧ ಸಾಕಷ್ಟು ಪುರಾವೆಗಳು ಕಂಡು ಬಂದಿದ್ದರಿಂದ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ.

3) ಚಾ.ಸಾ-1 ನನ್ನ ಸಮಕ್ಷಮ ಹಾಜರುಪಡಿಸಿದ ಪಿರ್ಯಾದಿಯನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿರುತ್ತದೆ, ಸಾಕ್ಷಿಯ ಸಹಿಯನ್ನು

ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿ.ಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-15(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಪಂಚನಾಮೆಯನ್ನು ಈಗಾಗಲೇ ನಿ.ಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-4(ಬಿ) ಎಂದು ಗುರುತಿಸಲಾಯಿತು. ಜಪ್ತು ಪಂಚನಾಮೆಯನ್ನು ನಿ.ಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-16(ಎ) ಎಂದು ಗುರುತಿಸಲಾಯಿತು. ನಿ.ಪಿ-16 ಜಪ್ತು ಪಂಚನಾಮೆ ಮಾಡುವಾಗ ವಶಪಡಿಸಿಕೊಳ್ಳಲಾದ ಸ್ವತ್ತುಗಳನ್ನು ನೋಡಿದರೆ ಗುರುತಿಸಬಲ್ಲೆ, ಅವುಗಳು ನ್ಯಾಯಾಲಯದ ಮುಂದೆ ಸದರಿ ಸ್ವತ್ತುಗಳು ನ್ಯಾಯಾಲಯದ ಮುಂದೆ ಇದ್ದು, ಅವುಗಳನ್ನು ಮು.ಮಾ-1 ರಿಂದ 5 ಎಂದು ಗುರುತಿಸಲಾಯಿತು.

4) ದಿನಾಂಕಃ 05.11.2016 ಮತ್ತು ದಿನಾಂಕಃ 18.11.2016 ರಂದು ತಹಶೀಲ್ದಾರ ಹಾವೇರಿ ಇವರಿಗೆ ದಾಖಲಾತಿಗಳನ್ನು ಪೂರೈಸಲು ನೀಡಿದ ಎರಡು ನೋಟಿಸನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳನ್ನುಖ ನಿ.ಪಿ-17 ಮತ್ತು ನಿ.ಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-17(ಎ) ಮತ್ತು ನಿ.ಪಿ-18(ಎ) ಎಂದು ಗುರುತಿಸಲಾಯಿತು. ದಿನಾಂಕಃ 01.03.2017 ರಂದು ತಹಶೀಲ್ದಾರ ಕಛೇರಿ ಹಾವೇರಿಯಿಂದ ನೀಡಿದ ಉತ್ತರವನ್ನು ಹಾಗೂ ಅದಕ್ಕೆ ಲಗತ್ತಿಸಿದ ದಾಖಲಾತಿಗಳನ್ನು ಒಟ್ಟಾಗಿ ನಿ.ಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-19(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮಂದೆ ಇರುವ ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಆರೋಪಿಗಳೇ ಮಾನ್ಯ ಜಿಲ್ಲಾ ಸತ್ರ ನ್ಯಾಯಾಲಯ ಹಾವೇರಿಯಿಂದ ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾದ ವ್ಯಕ್ತಿಗಳಾಗಿರುತ್ತಾರೆ. ನನ್ನ ಮುಂದೆ ಚಾ.ಸಾ-8,9,13,19,20,22,24,26 ರಿಂದ 28 ರವರು ನಿ.ಪಿ-5 ರಿಂದ 14 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ.

**ಪಾಟೀ ಸವಾಲು: ಶ್ರೀ.ಎಸ್.ಎಂ.ಕೆ ವಕೀಲರಿಂದ: ಆರೋಪಿತರ ಪರವಾಗಿ:**

8) ಈ ಪ್ರಕರಣದಲ್ಲಿ ಪಿರ್ಯಾದಿ ದಾಖಲಿಸಲು ಆದ ವಿಳಂಬದ ಕುರಿತಾಗಿ ನಾನು ತಯಾರಿಸಿದ ಪ್ರ.ವ.ವರದಿಯಲ್ಲಿ ಕಾಣಿಸಿಲ್ಲ ಅಂದರೆ ಸರಿ. ಚಾ.ಸಾ-1 ಇವರು ಪಿರ್ಯಾದಿಯನ್ನು ಅವರೇ ಸ್ವತಃ ಗಣಕೀಕೃತ ಮಾಡಿಕೊಂಡು ಬಂದು ನನ್ನ ಸಮಕ್ಷಮ ಹಾಜರುಪಡಿಸಿದ್ದಾರೆ. ಘಟನಾ ಸ್ಥಳದ ಪಂಚನಾಮೆಗಾಗಿ ಘಟನಾ ಸ್ಥಳಕ್ಕೆ ಒಟ್ಟು 2 ರಿಂದ 3 ಜನ ಹೋಗಿದ್ದೇವು. ಘಟನಾ ಸ್ಥಳದ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುವದಿಲ್ಲ. ಘಟನಾ ಸ್ಥಳದ ಪಂಚನಾಮೆಗೆ ಘಟನಾ ಸ್ಥಳದ ಅಕ್ಕಪಕ್ಕದ ವ್ಯಕ್ತಿಗಳನ್ನು ಕರೆದು ಸಹಿ ಮಾಡಿಸಿಕೊಂಡಿರುವದಿಲ್ಲ. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿ ಘಟನಾ ಸ್ಥಳದ ಪಂಚನಾಮೆಯನ್ನು ತಯಾರಿಸಿರುತ್ತೇನೆ ಅಂದರೆ ಸರಿಯಲ್ಲ. ಘಟನಾ ಸ್ಥಳದ ಪಂಚನಾಮೆಯನ್ನು ಬರೆಯಲು ಮತ್ತು ಅದಕ್ಕೆ ಮಾಹಿತಿಯನ್ನು ಯಾವ ವ್ಯಕ್ತಿ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ ಅಂದರೆ ಸರಿಯಲ್ಲ. ಮು.ಮಾ-1 ರಿಂದ 5 ಸ್ವತ್ತುಗಳನ್ನು ವಶಪಡಿಸಿಕೊಳ್ಳುವಾಗ ನಾನು ಜಪ್ತು ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ಅದೇ ರೀತಿ ಜಪ್ತು ಪಂಚನಾಮೆ ಮಾಡುವ ಕಾಲಕ್ಕೆ ಜಪ್ತು ಪಂಚನಾಮೆ ಮಾಡುವ ಸ್ಥಳದ ಅಕ್ಕಪಕ್ಕದ ವ್ಯಕ್ತಿಗಳನ್ನು ಪಂಚರಾಗಿ ಕರೆದಿಲ್ಲ ಅಂದರೆ ಸರಿ. ನಾನು ನನಗೆ ಬೇಕಾದವರನ್ನು ಘಟನಾ ಸ್ಥಳದ ಪಂಚನಾಮೆಗೆ ಮತ್ತು ಜಪ್ತು ಪಂಚನಾಮೆಗೆ ಪಂಚರಾಗಿ ಕರೆದು ಆರೋಪಿಗಳ ವಿರುದ್ಧ ಯಾವುದೇ ಆರೋಪ ಸಾಬೀತಾಗಿದ್ದರೂ ಸಹ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ-1 ರಿಂದ 5 ನಾನು ವಶಪಡಿಸಿಕೊಳ್ಳುವಾಗ ಅವು ಕೆಲಸ ಮಾಡುವ ಸ್ಥಿತಿಯಲ್ಲಿ ಇದ್ದವು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ನಾನು ಈ ಪ್ರಕರಣದಲ್ಲಿ ಯಾವುದೇ ಸಾಕ್ಷಿದಾರರ

ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ ಮತ್ತು ಈ ಪ್ರಕರಣದಲ್ಲಿ ಆರೋಪಿಗಳ ಯಾವುದೇ ತಪ್ಪು ಕಂಡು ಬರದೇ ಇದ್ದರೂ ಸಹ ನಾನು ಆರೋಪಿಗಳ ವಿರುದ್ದ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಸಿ.ಹೆಚ್.ಜಿ ವಕೀಲರಿಂದಃ 2 ನೇ ಆರೋಪಿ ಪರವಾಗಿಃ 1 ನೇ ಆರೋಪಿ ಪರವಾಗಿ ಮಾಡಿದ ಪಾಟೀ ಸವಾಲನ್ನೇ ಯಥಾವತ್ತಾಗಿ ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.